*(2 ನೇ ಆರೋಪಿಯು ನ್ಯಾಯಾಂಗ ಬಂದನದಲ್ಲಿದ್ದು, ಆಕೆಯನ್ನು ಈ ದಿನ **Google meet** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು.)*

ದಿನಾಂಕಃ 18-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ **1** ನೇ ಆರೋಪಿಯ ಪರವಾಗಿ ಶ್ರೀ ಹೆಚ್.ಸಿ.ಎನ್. ವಕೀಲರಿಂದಃ –

13. ದಿಃ 07-03-2021 ರಂದು ನೀವು ಪೊಲೀಸರಿಗೆ ಒಟ್ಟು ಎಷ್ಟು ದೂರನ್ನು ಕೊಟ್ಟಿದ್ದೀರಿ ಎಂದರೆ ಸಾಕ್ಷಿ ಆ ದಿನ ಯಾವುದೇ ದೂರನ್ನು ಕೊಟ್ಟಿಲ್ಲ ಎನ್ನುತ್ತಾರೆ. ಆ ದಿನ ನೀವು ಪೊಲೀಸ್ ಠಾಣೆಗೆ ಹೋಗಿಲ್ಲವೇ ಎಂದರೆ ಸಾಕ್ಷಿ ಹೋಗಿರಲಿಲ್ಲ, ಪೊಲೀಸರೇ ಸ್ಥಳಕ್ಕೆ ಬಂದಿದ್ದರು ಎನ್ನುತ್ತಾರೆ. ಪೊಲೀಸರು ಎಲ್ಲಿಗೆ ಬಂದಿದ್ದರು ಎಂದರೆ ಸಾಕ್ಷಿ ನಮ್ಮ ವಾಸದ ಮನೆಗೆ ಎನ್ನುತ್ತಾರೆ. ಆ ದಿನ ಪೊಲೀಸರು ನಿಮ್ಮನ್ನು ವಿಚಾರಿಸಿಲ್ಲ ಎಂದರೆ ಸಾಕ್ಷಿ ನಾನು ಬಿಜಿಯಾಗಿದ್ದೆನು, ಹಾಗಾಗಿ ವಿಚಾರಿಸಿಲ್ಲ ಎನ್ನುತ್ತಾರೆ. ಪೊಲೀಸರು ಬಂದಾಗ ಫ್ರಾಸಾ.5 ಮತ್ತು 6 ರವರು ಇದ್ದರೇ ಎಂದರೆ ಸಾಕ್ಷಿ ಇರಲಿಲ್ಲ ಎನ್ನುತ್ತಾರೆ. ನೀವು ಪೊಲೀಸ್ ಠಾಣೆಗೆ ಯಾವಾಗ ಹೋಗಿದ್ದೀರಿ ಎಂದರೆ ಸಾಕ್ಷಿ 5 ವರ್ಷಗಳಾಗಿರುವ ಕಾರಣ ನನಗೆ ನೆನಪಿಲ್ಲ ಎನ್ನುತ್ತಾರೆ.

14. ದಿಃ 07-03-2021 ರ ನಂತರ ನೀವು ಪೊಲೀಸ್ ಠಾಣೆಗೆ

ಹೋಗಿಲ್ಲ ಮತ್ತು ಪೊಲೀಸರೊಂದಿಗೆ ಮಾತನಾಡಿಲ್ಲ ಎಂದರೆ ಸಾಕ್ಷಿ ದೂರು ಕೊಡಲು ಹೋಗಿದ್ದೆನು ಎನ್ನುತ್ತಾರೆ. ದಿಃ 07-03-2021 ರ ಮಾರನೆ ದಿನ ನಾನು ಪೊಲೀಸ್ ಠಾಣೆಗೆ ದೂರು ಕೊಡಲು ಹೋಗಿದ್ದೆನು. ದೂರು ಕೊಟ್ಟ ಬಳಿಕ ನೀವು ಪೊಲೀಸರನ್ನು ಭೇಟಿ ಮಾಡಿಲ್ಲ ಎಂದರೆ ಸಾಕ್ಷಿ ಪೊಲೀಸರು ಮಹಜರ್ ಮಾಡಲು ಮನೆಯ ಬಳಿ ಬಂದಿದ್ದರು ಎನ್ನುತ್ತಾರೆ. ಆ ರೀತಿ ಅವರು ಭೇಟಿ ನೀಡಿದ ದಿನಾಂಕವನ್ನು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಮಹಜರಾದ ಬಳಿಕ ನೀವು ಪೊಲೀಸರನ್ನು ಭೇಟಿ ಮಾಡಿಲ್ಲ ಎಂದರೆ ಸಾಕ್ಷಿ ಆ ಬಳಿಕ ಪೊಲೀಸರಿಗೆ ದೂರು ಕೊಡಲು ಮತ್ತೊಮ್ಮೆ ಹೋಗಿದ್ದೆನು ಎನ್ನುತ್ತಾರೆ. ಆ ರೀತಿ ನೀವು ಹೋಗಿದ್ದು ಯಾವ ದಿನಾಂಕದಂದು ಎಂದರೆ ಸಾಕ್ಷಿ 5 ವರ್ಷಗಳಾಗಿರುವುದರಿಂದ ನೆನಪಿಲ್ಲ ಎನ್ನುತ್ತಾರೆ. ಮಹಜರ್ ಆದ ಎಷ್ಟು ದಿನಗಳ ಬಳಿಕ ಹೋಗಿದ್ದೀರಿ ಎಂದರೆ ಸಾಕ್ಷಿ 2 ದಿನ ಬಿಟ್ಟು ಹೋಗಿದ್ದೆನು ಎನ್ನುತ್ತಾರೆ. ಆದಾದ ನಂತರ ನೀವು ಪೊಲೀಸರನ್ನು ಭೇಟಿ ಮಾಡಿಲ್ಲ ಎಂದರೆ ಸರಿ. ಮಹಜರ್ ಆದ 2 ದಿನಗಳ ನಂತರ ನೀವು ಪೊಲೀಸ್ ಠಾಣೆಗೆ ಹೋಗಿದ್ದಾಗಿ ಹೇಳಿದ್ದೀರಿ ಆಗ ನಿಮ್ಮ ಜೊತೆ ಯಾರೆಲ್ಲಾ ಬಂದಿದ್ದರು ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ.

15. ಮೃತ ಪೂರ್ಣಿಮಳ ಬಳಿ ಮೊಬೈಲ್ ಇತ್ತು ಎಂದರೆ ಸರಿ. ಆ ವಿಚಾರವನ್ನು ನೀವು ಪೊಲೀಸರಿಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ಮೃತ ಪೂರ್ಣಿಮ ನಮ್ಮ ಗ್ರಾಮದ ಹೆಣ್ಣು ಮಕ್ಕಳ ಜೊತೆ ಶಾಲೆಗೆ ನಡೆದುಕೊಂಡು ಹೋಗಿ ಬರುತ್ತಿದ್ದಳು. ಅವರು ಶಾಲೆಗೆ ಹೋಗಿ ಬರುವ ರಸ್ತೆಯಲ್ಲಿ ವಾಸದ ಮನೆಗಳು ಮತ್ತು ಅಂಗಡಿ ಮುಗ್ಗಟ್ಟುಗಳು ಇವೆ ಎಂದರೆ ಸರಿ. 1 ನೇ ಆರೋಪಿ ಮೃತ

ಪೂರ್ಣಿಮಳಿಗೆ ತೊಂದರೆ ಕೊಟ್ಟನು ಎಂದು ಹೇಳಿದ್ದೀರಿ ಆ ಬಗ್ಗೆ ನೀವು ಆಕೆಯ ಸ್ನೇಹಿತೆಯರನ್ನು ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಯಾವ ಸ್ಥಳದಲ್ಲಿ, ಯಾವ ದಿನಾಂಕ ಮತ್ತು ಯಾವ ಸಮಯಕ್ಕೆ ಆತ ಆಕೆಗೆ ತೊಂದರೆ ಕೊಟ್ಟನು ಮತ್ತು ಆ ಸಮಯದಲ್ಲಿ ಆಕೆಯೊಂದಿಗೆ ಬೇರೆ ಯಾರು ಇದ್ದರು ಎಂದು ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಆ ಸಮಯದಲ್ಲಿ ಆಕೆಯೊಂದಿಗೆ ಯಾರು ಇದ್ದರು ಎಂದರೆ ಸಾಕ್ಷಿ ಆಕೆಯೊಂದಿಗೆ ಶಾಲೆಗೆ ಹೋಗುವ ಆಕೆಯ 4 ರಿಂದ 5 ಜನ ಸ್ನೇಹಿತೆಯರು ಇದ್ದುದ್ದಾಗಿ ಆಕೆ ನನಗೆ ತಿಳಿಸಿದ್ದಳು ಎನ್ನುತ್ತಾರೆ. ಅವರು ಹೆಸರೇನು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ವಿಚಾರವನ್ನು ನೀವು ಪೊಲೀಸರಿಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

16. ಮೃತ ಪೂರ್ಣಿಮಳು ಶಾಲೆಗೆ ಹೋಗುವ ರಸ್ತೆಯಲ್ಲಿ ನೀವು ಯಾರನ್ನಾದರು ಕುರಿತು 1 ನೇ ಆರೋಪಿ ಆಕೆಗೆ ತೊಂದರೆ ಕೊಟ್ಟ ಬಗ್ಗೆ ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಮೃತ ಪೂರ್ಣಿಮಳ ಶಾಲೆಗೆ ಹೋಗಿ ಆ ಬಗ್ಗೆ ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

17. 1 ಮತ್ತು 2 ನೇ ಆರೋಪಿತರ ನಡುವೆ ಅಕ್ರಮ ಸಂಬಂಧ ಇತ್ತು ಎಂದು ಹೇಳಿದ್ದೀರಿ ಅದು ನಿಮಗೆ ಮೊದಲ ಬಾರಿಗೆ ಯಾವಾಗ ತಿಳಿಯಿತು ಎಂದರೆ ಸಾಕ್ಷಿ 5 ವರ್ಷಗಳಾಗಿವೆ ನೆನಪಿಲ್ಲ ಎನ್ನುತ್ತಾರೆ. ಸದರಿ ವಿಚಾರವನ್ನು ಮೃತ ಪೂರ್ಣಿಮ ನಿಮಗೆ ತಿಳಿಸಿದ್ದಾಗಿ ಹೇಳಿದ್ದೀರಿ ಆಗ ಬೇರೆ ಯಾರೆಲ್ಲಾ ಇದ್ದರು ಎಂದರೆ ಸಾಕ್ಷಿ ಬೇರೆ ಯಾರು ಇರಲಿಲ್ಲ ಎನ್ನುತ್ತಾರೆ. ಸದರಿ ವಿಚಾರವನ್ನು ಮೃತ ಪೂರ್ಣಿಮ ಯಾವ ಜಾಗದಲ್ಲಿ ತಿಳಿಸಿದ್ದರು ಎಂದು ನಿಮಗೆ ಹೇಳಲು ಆಗುವುದಿಲ್ಲ ಎಂದರೆ ಸರಿ. ಆ ಬಗ್ಗೆ ನೀವು ಪೊಲೀಸರಿಗೆ ಅಥವಾ ಯಾವುದಾದರೂ ಸಂಘ ಸಂಸ್ಥೆಗಳಿಗೆ

ದೂರನ್ನು ಕೊಡಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆ ಬಗ್ಗೆ ನಿಮ್ಮ ಸಂಬಂಧಿಕರಿಗೆ ತಿಳಿಸಿ ಮನೆಯಲ್ಲಿ ಪಂಚಾಯ್ತಿ ಮಾಡಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ಪಂಚಾಯ್ತಿಗೆ ಯಾರೆಲ್ಲಾ ಸೇರಿದ್ದರು ಎಂದರೆ ಸಾಕ್ಷಿ ಈಗ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ಸದರಿ ಪಂಚಾಯ್ತಿಯಲ್ಲಿ ಏನಾದರು ಬರವಣಿಗೆ ಮಾಡಲಾಯಿತೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆ ಬಗ್ಗೆ ನೀವು 1 ನೇ ಆರೋಪಿಯನ್ನು ಪ್ರಶ್ನಿಸಿ ಆತನ ವಿರುದ್ಧ ದೂರನ್ನು ಕೊಡುವುದಾಗಿ ಹೇಳಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

18. 1 ನೇ ಆರೋಪಿಗೆ ಮದುವೆಯಾಗಿದೆ, ಆತನ ಹೆಂಡತಿ ಮತ್ತು ಮಕ್ಕಳು ಇದ್ದಾರೆ ಎಂದರೆ ಸರಿ. 1 ಮತ್ತು 2 ನೇ ಆರೋಪಿತರ ನಡುವೆ ಅಕ್ರಮ ಸಂಬಂಧ ಇದ್ದುದ್ದಾಗಿ ಹೇಳಿದ್ದೀರಿ ಆ ವಿಚಾರವನ್ನು 1 ನೇ ಆರೋಪಿಯ ಹೆಂಡತಿ ಮತ್ತು ಮಕ್ಕಳಿಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. 1 ನೇ ಆರೋಪಿಯ ಮನೆಯಲ್ಲಿ ಆತನೊಂದಿಗೆ ಆತನ ಹೆಂಡತಿ ಮತ್ತು ಮಗ ವಾಸವಾಗಿದ್ದಾರೆ. 1 ನೇ ಆರೋಪಿಯ ಮಗನ ವಯಸ್ಸು ಎಷ್ಟು ಎಂದು ನನಗೆ ಗೊತ್ತಿಲ್ಲ.

19. ಫ್ರಾಸಾ.5, 6 ಮತ್ತು ಚಾಸಾ.14 ರವರು ನಿಮ್ಮ ಸ್ನೇಹಿತರು ಎಂದರೆ ಸರಿ. ಅವರನ್ನು ಕರೆದುಕೊಂಡು ಹೋಗಿ 1 ನೇ ಆರೋಪಿಯೊಂದಿಗೆ ಮಾತನಾಡಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಫ್ರಾಸಾ.5 ಮತ್ತು 1 ನೇ ಆರೋಪಿ ನಡುವೆ ತೆಂಗಿನ ಕಾಯಿಗಳನ್ನು ಬಾಡಿಗೆಗೆ ತೆಗೆದುಕೊಂಡು ಹೋಗುವ ವಿಚಾರಕ್ಕೆ ವೈಮನಸ್ಸು ಇದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿದಿನ ನೀವು, ಫ್ರಾಸಾ.5, 6 ಮತ್ತು ಚಾಸಾ.14 ರವರು ಪಾರ್ಟಿ ಮಾಡಲು ಬಾರ್ ಗೆ ಹೋಗುತ್ತೀರಿ ಎಂದರೆ ಸರಿಯಲ್ಲ.

20. ಎಸ್.ಬಿದರೆ ಗ್ರಾಮದಲ್ಲಿ 500 ಕ್ಕೂ ಹೆಚ್ಚು ಮನೆಗಳಿವೆ ಎಂದರೆ ಸರಿ. ಮೃತ ಪೂರ್ಣಿಮ ಆರೋಪಿತರ ನಡುವಿನ ಅಕ್ರಮ ಸಂಬಂಧದ ಬಗ್ಗೆ ತಿಳಿಸಿದ ಬಳಿಕ ಅದರ ಸತ್ಯಾಸತ್ಯತೆಯನ್ನು ಸಂಬಂಧಿಕರಿಂದ ತಿಳಿದುಕೊಳ್ಳಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಮೃತ ಪೂರ್ಣಿಮಳ ಆತ್ಮೀಯ ಸ್ನೇಹಿತೆಯರು ಯಾರು ಮತ್ತು ಆಕೆ ಯಾರೊಂದಿಗೆ ಶಾಲೆಗೆ ಹೋಗಿ ಬರುತ್ತಿದ್ದಳು ಎಂದು ಪೊಲೀಸರು ನಿಮ್ಮನ್ನು ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

21. 1 ನೇ ಆರೋಪಿ ಮೃತ ಪೂರ್ಣಿಮಳಿಗೆ ಕಿರುಕುಳ ಕೊಡುತ್ತಿದ್ದಾಗಿ ನೀವು ಪೊಲೀಸರಿಗೆ ತಿಳಿಸಿಲ್ಲ ಎಂದರೆ ಸರಿಯಲ್ಲ. ಆತ ನಿಮ್ಮ ಮಗಳಿಗೆ ಏನು ಕಿರುಕುಳ ಕೊಡುತ್ತಿದ್ದನು ಎಂದು ನೀವು ಪೊಲೀಸರಿಗೆ ತಿಳಿಸಿಲ್ಲ ಎಂದರೆ ಸರಿ. ಮೃತ ಪೂರ್ಣಿಮ ಸಾಯುವ ಪೂರ್ವದಲ್ಲಿ ಯಾವುದೇ ಚೀಟಿಯನ್ನು ಬರೆದಿಟ್ಟಿರಲಿಲ್ಲ.

22. 1 ಮತ್ತು 2 ನೇ ಆರೋಪಿತರು ಒಟ್ಟಿಗೆ ಇದ್ದಿದ್ದನ್ನು ನೀವು ನೋಡಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಎಲ್ಲಿ ಎಂದರೆ ಸಾಕ್ಷಿ ನಮ್ಮ ಮನೆಯಲ್ಲಿ ಎನ್ನುತ್ತಾರೆ. ಯಾವಾಗ ಎಂದರೆ ಸಾಕ್ಷಿ ದಿನಾಂಕ ಗೊತ್ತಿಲ್ಲ ಎನ್ನುತ್ತಾರೆ. ಆಗ ನಿಮ್ಮ ಅಕ್ಕಪಕ್ಕದ ಮನೆಯವರಿಗೆ ಮತ್ತು ತಾಯಿಗೆ ಆ ವಿಚಾರವನ್ನು ತಿಳಿಸಿದ್ದೀರಾ ಎಂದರೆ ಸಾಕ್ಷಿ ಅಕ್ಕಪಕ್ಕದವರಿಗೆ ಹೇಗೆ ಹೇಳಲಿ, ನನ್ನ ತಾಯಿಗೆ ತಿಳಿಸಿದ್ದೇನೆ ಎನ್ನುತ್ತಾರೆ. ಆ ಸಂದರ್ಭದಲ್ಲಿ ನೀವು ಪೊಲೀಸರಿಗೆ ದೂರು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

23. ಪೂರ್ಣಿಮ ಮೃತಪಡುವ ಹಿಂದೆಯೇ ನನ್ನ ತಾಯಿ ನನ್ನ ಅಣ್ಣನೊಂದಿಗೆ ವಾಸವಾಗಿದ್ದರು. 1 ಮತ್ತು 2 ನೇ ಆರೋಪಿಯ ನಡುವೆ ಅಕ್ರಮ ಸಂಬಂಧ ಇದುದದ್ದಾಗಿ ಮತ್ತು ನೀವು ಅವರಿಬ್ಬರು ಒಟ್ಟಿಗೆ

ಇರುವುದನ್ನು ನೋಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಮೃತ ಪೂರ್ಣಿಮ ಶಾಲೆಗೆ ಹೋಗಿ ಬರುವಾಗ ದಾರಿಯಲ್ಲಿ 1 ನೇ ಆರೋಪಿ ಆಕೆಗೆ ಕಿರುಕುಳ ಕೊಟ್ಟಿದ್ದಾಗಿ, ಹೆದರಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

24. ನೀವು ಪೊಲೀಸರಿಗೆ ದೂರನ್ನು ಕೊಟ್ಟಿದ್ದಾಗಿ, ನಂತರ ಪೊಲೀಸರು ನಿಮ್ಮ ಮನೆಯ ಹತ್ತಿರ ಬಂದು ಮಹಜರ್ ಬರೆದುಕೊಂಡು ಹೋಗಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಪ್ರಾಸಾ.5, 6 ಮತ್ತು ಚಾಸಾ.14 ರವರೊಂದಿಗೆ ನೀವು ಸೇರಿ 1 ನೇ ಆರೋಪಿಯನ್ನು ಹೇಗಾದರೂ ಮಾಡಿ ಈ ಪ್ರಕರಣದಲ್ಲಿ ಸಿಲುಕಿಸಬೇಕೆಂದು ಆತನ ವಿರುದ್ಧ ಸುಳ್ಳು ಆರೋಪ ಹೊರಿಸಿ ಸುಳ್ಳು ದೂರನ್ನು ಕೊಟ್ಟು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪೂರ್ಣಿಮಳ ಸಾವಿಗೂ 1 ನೇ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 2 ನೇ ಆರೋಪಿ ಪರವಾಗಿಃ LADCS ನ Deputy Chief Defense counsel ಆದ ಶ್ರೀ ಡಿ ಬಿ ಡಿ ವಕೀಲರಿಂದಃ</u>**

25. ನನ್ನ ಮೊದಲನೇ ಮಗಳಾದ ಪ್ರಾಸಾ.8 ರವರು ಎಂ.ಬಿ.ಎ. ವಿದ್ಯಾಭ್ಯಾಸ ಮುಗಿಸಿದ್ದಾರೆ. ಪೂರ್ಣಿಮ ಮೃತಪಡುವ ಕಾಲಕ್ಕೆ ಪ್ರಾಸಾ.8 ರವರು ಪಿ.ಯು.ಸಿ ಓದುತ್ತಿದ್ದರು, ಆ ಸಮಯಕ್ಕೆ ಅವರು ಚಿಕ್ಕಮಗಳೂರಿನ ಹಾಸ್ಟೇಲಿನಲ್ಲಿ ಉಳಿದುಕೊಂಡಿದ್ದರು. ಆ ಸಮಯದಲ್ಲಿ ಪ್ರಾಸಾ.8 ರವರು ವಾರಕ್ಕೆ ಒಮ್ಮೆ ಮತ್ತು ರಜೆ ಇದ್ದಾಗ ಊರಿಗೆ ಬಂದು ಹೋಗುತ್ತಿದ್ದರು. ಪ್ರಾಸಾ.8 ರವರು ಉತ್ತಮವಾಗಿ ವಿದ್ಯಾಭ್ಯಾಸ ಮಾಡುತ್ತಿದ್ದರು ಎಂದರೆ ಸರಿ. ಮೃತ ಪೂರ್ಣಿಮ ಚೆನ್ನಾಗಿ

ವಿದ್ಯಾಭ್ಯಾಸ ಮಾಡುತ್ತಿರಲಿಲ್ಲ, ಆಕೆ ಶಾಲೆಯನ್ನು ಬಿಟ್ಟಿದ್ದಳು ಎಂದರೆ ಸರಿಯಲ್ಲ. ಆಕೆ ಶಾಲೆಗೆ ಹೋಗದ ಕಾರಣ ಶಿಕ್ಷಕರು ನಿಮ್ಮ ಮನೆಗೆ ಬಂದು ಆಕೆಯನ್ನು ಶಾಲೆಗೆ ಕಳುಹಿಸಿ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ನೀವು ಪೂರ್ಣಿಮಳನ್ನು ಕುರಿತು ಪ್ರಾಸಾ.8 ರವರಂತೆ ಚೆನ್ನಾಗಿ ಓದು ಎಂದು ಒತ್ತಡ ಹೇರುತ್ತಿದ್ದೀರಿ ಎಂದರೆ ಸಾಕ್ಷಿ ಅಕ್ಕನಂತೆ ಚೆನ್ನಾಗಿ ಓದು ಎಂದು ಹೇಳುತ್ತಿದ್ದೆನು ಎನ್ನುತ್ತಾರೆ. ನೀವು ಪೂರ್ಣಿಮಗಳಿಗೆ ಶಾಲೆಗೆ ಸರಿಯಾಗಿ ಹೋಗುವಂತೆ ಬೈಯುತ್ತಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆಕೆ ಸರಿಯಾಗಿ ಶಾಲೆಗೆ ಹೋಗುತ್ತಿದ್ದಳು ಎನ್ನುತ್ತಾರೆ. ಮೃತ ಪೂರ್ಣಿಮ ಕೆಲವೊಮ್ಮೆ ಶಾಲೆಗೆ ಹೋಗುವುದಿಲ್ಲ ಎಂದು ಹಠ ಹಿಡಿಯುತ್ತಿದ್ದಳು ಎಂದರೆ ಸರಿಯಲ್ಲ. ಶಾಲೆಗೆ ಹೋಗುವಂತೆ ನೀವು ಆಕೆಗೆ ಒತ್ತಡ ಹೇರಿದ್ದರಿಂದ ಆಕೆ ಕೆಲ ದಿನಗಳ ಕಾಲ ಕಿನ್ನತೆಗೆ ಒಳಗಾಗಿದ್ದಳು ಎಂದರೆ ಸರಿಯಲ್ಲ. ಪೂರ್ಣಿಮ ಮೃತಪಟ್ಟ ದಿನ ಭಾನುವಾರವಾಗಿದ್ದು ಹಿಂದಿನ ದಿನ ಆಕೆ ಶಾಲೆಗೆ ಹೋಗಿ ಬಂದಿದ್ದಳು. ಆ ಸಮಯದಲ್ಲಿ ಆಕೆಗೆ ಪರೀಕ್ಷೆ ಇತ್ತು ಎಂದರೆ ಸರಿ. ಪರೀಕ್ಷೆಯನ್ನು ಚೆನ್ನಾಗಿ ಬರೆಯುವಂತೆ ನೀವು ಆಕೆಗೆ ಒತ್ತಡ ಹೇರಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸೋಮವಾರ ಆಕೆಗೆ 10 ನೇ ತರಗತಿ ಪರೀಕ್ಷೆ ಪ್ರಾರಂಭವಾಗುತ್ತಿತ್ತು, ಭಾನುವಾರ ಆಕೆ ಮೃತಪಟ್ಟಳು ಎನ್ನುತ್ತಾರೆ.

26. ಮೃತ ಪೂರ್ಣಿಮ ತನ್ನ ಮೊಬೈಲಿನಲ್ಲಿ ವಾಟ್ಸಪ್ ಮತ್ತು ಫೇಸ್ಬುಕ್ ಬಳಸುತ್ತಿದ್ದಳು ಎಂದರೆ ಸರಿಯಲ್ಲ. ಆಗ ನೀವು ಮತ್ತು 2 ನೇ ಆರೋಪಿ ಮೃತ ಪೂರ್ಣಿಮಳಿಗೆ ಚೆನ್ನಾಗಿ ಓದಿಕೊಳ್ಳುವಂತೆ ಹೇಳಿದ್ದೀರಾ ಎಂದರೆ ಸಾಕ್ಷಿ ಮೊಬೈಲ್ ಜಾಸ್ತಿ ಬಳಸಬೇಡ ಓದಿಕೋ ಎಂದಷ್ಟೇ ಹೇಳಿದ್ದೇವೆ ಎನ್ನುತ್ತಾರೆ. ನೀವು ಓದು ಎಂದು ಒತ್ತಡ ಹೇರಿದ್ದ

ಕಾರಣ ಮತ್ತು ಪರೀಕ್ಷೆಯ ಭಯದಿಂದ ಪೂರ್ಣಿಮ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದರೆ ಸರಿಯಲ್ಲ. ಆಕೆಯ ಸಾವಿಗೂ 2 ನೇ ಆರೋಪಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**(ಉಳಿದಂತೆ 1 ನೇ ಆರೋಪಿ ಪರ ಶ್ರೀ ಹೆಚ್.ಸಿ.ಎನ್. ವಕೀಲರು ಮಾಡಲಾದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ).**

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ